# ದೇವರೊಂದಿಗೆ ಸಮಯ

Children are Important



## ಡಿಸೆಂಬರ್

| ಭಾನುವಾರ | ಸೋಮವಾರ | ಮಂಗಳವಾರ | ಬುಧವಾರ | ಗುರುವಾರ | ಶುಕ್ರವಾರ | ಶನಿವಾರ |
|---|---|---|---|---|---|---|
| | | **1** ನೀವು ಯಾವ ದೇಶಕ್ಕೆ ಪ್ರಯಾಣಿಸಲು ಬಯಸುತ್ತೀರೋ ಆ ದೇಶಕ್ಕಾಗಿ ಪ್ರಾರ್ಥನೆ ಮಾಡಿರಿ, ಆ ದೇಶದ ಬಾವುಟವನ್ನು ಬರೆದು ಅದಕ್ಕೆ ಬಣ್ಣ ಹಚ್ಚಿರಿ. | **2** ಯೆಶಾಯ 9:6 ಓದಿರಿ ಮತ್ತು ಆ ವಾಕ್ಯವು ನಿಮಗೆ ಏನಾಗಿದೆ ಎಂದು ಬರೆಯಿರಿ. | **3** ನೀವು ಮುಂಜಾನೆ ಏಳುವಾಗ ದೇವರು ನಿಮಗೆ ಮತ್ತೊಂದು ದಿನದ ಜೀವಿತವನ್ನು ಕೊಟ್ಟದ್ದಕ್ಕಾಗಿ ಆತನಿಗೆ ಕೃತಜ್ಞತೆ ಸಲ್ಲಿಸಿರಿ. | **4** ನಿಮ್ಮ ಕ್ರಿಯೆಗಳ ಮೂಲಕ ಇತರರಿಗೆ ದೇವರ ಪ್ರೀತಿಯನ್ನು ತೋರಿಸಲು ನೀವು ಬಲಗೊಳ್ಳುವಂತೆ ದೇವರು ಸಹಾಯ ಮಾಡಲಿ ಎಂದು ಪ್ರಾರ್ಥನೆ ಮಾಡಿರಿ. | **5** ಇಂದು ನೀವು ಮಾಡಬಹುದಾದ ಒಳ್ಳೆಯ ಕೆಲಸದ ಬಗ್ಗೆ ಯೋಚಿಸಿರಿ, ಅದರ ಬಗ್ಗೆ ಪ್ರಾರ್ಥಿಸಿ, ಅದನ್ನು ತಪ್ಪದೆ ಮಾಡಿರಿ. |
| **6** ನಿಮ್ಮ ಭಾವನೆಗಳನ್ನು ಯಾರಾದರೂ ನೋಯಿಸಿದ್ದರೆ ಅವರಿಗಾಗಿ ಪ್ರಾರ್ಥನೆ ಮಾಡಿರಿ. | **7** ನಿಮ್ಮ ಸಂಡೇ ಸ್ಕೂಲ್ ಟೀಚರ್ ಗೆ ಥ್ಯಾಂಕ್ಯೂ ಸಂದೇಶ ಬರೆದು ಕಳುಹಿಸಿರಿ. | **8** ನಿಮ್ಮ ಜೀವಿತದಲ್ಲಿ ದೇವರಿಗೆ ಇಷ್ಟವಾದ ಕಾರ್ಯಗಳೇನಾದರೂ ಇವೆಯೇ ಎಂದು ಯೋಚಿಸಿರಿ ಮತ್ತು ಅವುಗಳನ್ನು ಬಿಟ್ಟುಬಿಡಲು ಸಹಾಯ ಮಾಡುವಂತೆ ದೇವರನ್ನು ಬೇಡಿಕೊಳ್ಳಿರಿ. | **9** ಈ ವಾರ, ನಿಮಗೆ ತೊಂದರೆ ಕೊಡುತ್ತಿರುವ ವಿಷಯ ಏನಾದರೂ ಇದೆಯೇ ಎಂದು ತಿಳಿದುಕೊಳ್ಳಿರಿ. ನಿಮಗೆ ಸಂತೋಷವನ್ನು ಕೊಡುವಂತೆ ದೇವರನ್ನು ಬೇಡಿಕೊಳ್ಳಿರಿ. | **10** ಹತಾಶೆಯ ಕ್ಷಣಗಳನ್ನು ಅನುಭವಿಸುತ್ತಿರುವ ಮಕ್ಕಳನ್ನು ಸಂರಕ್ಷಿಸುವಂತೆ ದೇವರನ್ನು ಬೇಡಿಕೊಳ್ಳಿರಿ. | **11** ಯೇಸು ಕ್ರಿಸ್ತನ ಬಗ್ಗೆ ಗೊತ್ತಿಲ್ಲದೆ ಇರುವ ನಿಮ್ಮ ಸಮುದಾಯದ ಜನರಿಗಾಗಿ ಪ್ರಾರ್ಥನೆ ಮಾಡಿರಿ ಮತ್ತು ಒಂದುವೇಳೆ ಸಾಧ್ಯವಾದರೆ, ಆತನ ಬಗ್ಗೆ ಅವರಿಗೆ ತಿಳಿಸಿರಿ. | **12** ಮಕ್ಕಳೇ ಪ್ರಮುಖರು ತಂಡದ ಸಿಬ್ಬಂದಿಗಳಿಗಾಗಿ ಪ್ರಾರ್ಥನೆ ಮಾಡಿರಿ. |
| **13** ನಿಮ್ಮ ಕುಟುಂಬದ ಸದಸ್ಯರ ಹೆಸರುಗಳನ್ನು ಹೇಳಿ ಪ್ರಾರ್ಥನೆ ಮಾಡಿರಿ. | **14** ನಿಮಗೆ ಸಮಾಧಾನವನ್ನು ಕೊಡುವಂಥ ಹಾಡು ಹಾಡಿರಿ. | **15** ದೇವರು ನಿಮಗೆ ಕೊಟ್ಟಿರುವ ಆರೋಗ್ಯಕ್ಕಾಗಿ ಆತನಿಗೆ ಸ್ತೋತ್ರ ಹೇಳಿರಿ. | **16** ದೇವರು ನಿಮಗೂ, ನಿಮ್ಮ ಕುಟುಂಬದವರಿಗೂ ತೋರಿರುವ ಪ್ರೀತಿಗಾಗಿ ಆತನಿಗೆ ಸ್ತೋತ್ರ ಹೇಳಿರಿ: ಕೀರ್ತನೆ 107:8-9 ಓದಿರಿ. | **17** ಒಂದುವೇಳೆ ಏನಾದರೂ ತಪ್ಪು ಮಾಡುವ ಶೋಧನೆ ನಿಮಗೆ ಆಗುತ್ತಿದೆಯೇ ಎಂದು ಯೋಚಿಸಿರಿ, ಸರಿಯಾದ ಕಾರ್ಯಗಳನ್ನು ಮಾಡಲು ನಿಮಗೆ ಸಹಾಯ ಮಾಡುವಂತೆ ದೇವರನ್ನು ಬೇಡಿಕೊಳ್ಳಿರಿ. | **18** ಕಷ್ಟದ ಪರಿಸ್ಥಿತಿಯನ್ನು ಎದುರಿಸುತ್ತಿರುವ ನಿಮ್ಮ ಪ್ರೀತಿ ಪಾತ್ರರಿಗಾಗಿ ಪ್ರಾರ್ಥನೆ ಮಾಡಿರಿ. | **19** ನಿಮ್ಮ ತಂದೆತಾಯಿಗಳನ್ನು ಕೇಳಿ, ನೀವು ಉಪಯೋಗಿಸದೆ ಇರುವ ವಸ್ತುಗಳನ್ನು ತೆಗೆದುಕೊಳ್ಳಿರಿ ಮತ್ತು ಅವುಗಳ ಅವಶ್ಯಕತೆ ಯಾರಿಗಿದೆಯೋ ಅವರನ್ನು ಹುಡುಕಿ ಅವರಿಗೆ ಕೊಡಿರಿ. ಮತ್ತಾಯ 22:36-40 |
| **20** ನಿಮಗೆ ಕ್ರೀಡಾಪಟು, ಸೈನಿಕ ಅಥವಾ ಡಾಕ್ಟರ್ ಆಗಬೇಕೆಂಬ ಕನಸು ಇರಬಹುದು. ದೊಡ್ಡ ಕನಸುಗಳನ್ನು ಕಾಣಿರಿ, ನಮ್ಮ ದೇವರು ದೊಡ್ಡವನಾಗಿದ್ದಾನೆ. | **21** ನಿಮ್ಮ ಜೀವಿತದ ಸಣ್ಣಪುಟ್ಟ ವಿಷಯಗಳ ಕಡೆಗೆ ಗಮನಹರಿಸಿರಿ. ನೀವು ನಿಮ್ಮ ತಂದೆತಾಯಿಗಳಿಗೆ ವಿಧೇಯರಾಗುತ್ತಾ ಇದ್ದೀರೋ? ಜನರೊಂದಿಗೆ ಬೆರೆಯುತ್ತಾ ಇದ್ದೀರೋ? | **22** ದೇವರನ್ನು ಆರಾಧಿಸಲು ನಿಮ್ಮನ್ನು ಪ್ರೋತ್ಸಾಹಪಡಿಸುವಂಥ ಹಾಡುಗಳನ್ನು ಕಲಿತುಕೊಳ್ಳಿರಿ ಅಥವಾ ಆತನು ನಿಮಗೆ ಮಾಡಿರುವ ಒಳ್ಳೆಯ ಕಾರ್ಯಗಳಿಗಾಗಿ ಆತನಿಗೆ ಕೃತಜ್ಞತೆಗಳನ್ನು ಸಲ್ಲಿಸಿರಿ. | **23** ವೈಯಕ್ತಿಕವಾಗಿ ಅಥವಾ ವೀಡಿಯೋ ಕಾಲ್ ಮೂಲಕ ನಿಮ್ಮ ಅಜ್ಜಿತಾತನಿಗೆ ನಾವು ನಿಮ್ಮನ್ನು ಪ್ರೀತಿಸುತ್ತೇವೆ ಎಂದು ಹೇಳಿರಿ ಮತ್ತು ಅವರಿಗಾಗಿ ಪ್ರಾರ್ಥನೆ ಮಾಡಿರಿ. | **24** ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಟ್ಟಿರುವ ನಿಮಿತ್ತ ಲೋಕದಾದ್ಯಂತ ಹಿಂಸೆಗಳಿಗೆ ಒಳಗಾಗುತ್ತಿರುವ ಜನರಿಗಾಗಿ ಪ್ರಾರ್ಥನೆ ಮಾಡಿರಿ. | **25** ದೇವರೇ ನಿನ್ನ ಕುಮಾರನಾದ ಯೇಸು ಕ್ರಿಸ್ತನನ್ನು ಕಳುಹಿಸಿದ್ದಕ್ಕಾಗಿ ನಿನಗೆ ಸ್ತೋತ್ರ, ಈಗ ನಮಗೆ ಆತನ ಮೂಲಕ ನಿತ್ಯಜೀವ ದೊರೆತಿರುವದಕ್ಕಾಗಿ ನಿನಗೆ ಸ್ತೋತ್ರ. | **26** ಯೆಶಾಯ 1:17 ಓದಿರಿ ಮತ್ತು ನ್ಯಾಯ, ಸಮಾಧಾನ ಮತ್ತು ಪ್ರೀತಿಗಾಗಿ ಪ್ರಾರ್ಥನೆ ಮಾಡಿರಿ. |
| **27** ಮುಂದಿನ ವರ್ಷ ನೀವು ಬಯಸುವ ಐದು ಕಾರ್ಯಗಳನ್ನು ಬರೆದುಕೊಳ್ಳಿರಿ ಮತ್ತು ಅವುಗಳನ್ನು ಕೊಡುವಂತೆ ದೇವರಿಗೆ ಪ್ರಾರ್ಥನೆ ಮಾಡಿರಿ. | **28** ಈ ವರ್ಷ ನೀವು ಅನುಭವಿಸಿರುವ ಎಲ್ಲವುಗಳ ಬಗ್ಗೆ ಯೋಚನೆ ಮಾಡಿರಿ ಮತ್ತು ನಿಮ್ಮ ಕುಟುಂಬದ ಹಿತಕ್ಕಾಗಿ ಪ್ರಾರ್ಥನೆ ಮಾಡಿರಿ. | **29** ನೀವು ಬಿಡಿಸಿರುವ ಬಾವುಟವನ್ನು ತೆಗೆದುಕೊಳ್ಳಿರಿ ಮತ್ತು ದೇವರ ಚಿತ್ತವಾದರೆ ಆ ದೇಶದಲ್ಲಿ ಸಮಾಧಾನವನ್ನು ಒದಗಿಸುವಂತೆ ದೇವರನ್ನು ಬೇಡಿಕೊಳ್ಳಿರಿ. | **30** ಈ ತಿಂಗಳು ನಿಮ್ಮ ಸಂತೋಷಪಡಿಸಿದ ಕಾರ್ಯಗಳನ್ನೆಲ್ಲಾ ದೇವರಿಗೆ ಹೇಳಿರಿ. | **31** ಈ ವರ್ಷವೆಲ್ಲಾ ನಿಮ್ಮ ಸಂಗಡ ಇದ್ದದ್ದಕ್ಕಾಗಿ, ನಿಮ್ಮನ್ನು ಮತ್ತು ನಿಮ್ಮ ಕುಟುಂಬದವರನ್ನು ನೋಡಿಕೊಂಡದ್ದಕ್ಕಾಗಿ ದೇವರಿಗೆ ಸ್ತೋತ್ರ ಹೇಳಿರಿ. | | |



ಪ್ರಿಯರಾದ ಮಕ್ಕಳೇ, ನಾವು ಬರೀಮಾತಿನಿಂದಾಗಲಿ ಬಾಯುಪಚಾರದಿಂದಾಗಲಿ ಪ್ರೀತಿಸುವವರಾಗಿರಬಾರದು; ನಿಮ್ಮ ಪ್ರೀತಿಯು ಕೃತ್ಯದಲ್ಲಿಯೂ ಸತ್ಯದಲ್ಲಿಯೂ ತೋರಬೇಕು. 1 ಯೋಹಾನ 3:18

WWW.CHILDRENAREIMPORTANT.COM